**ಸಾಕ್ಷಿಗೆ ದಿನಾಂಕಃ 27.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ Smt.BKR ರವರಿಂದಃ**

1) **ಪ್ರಥಮ ವರ್ತಮಾನ ವರದಿ** ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು**,** **ಪೋಲಿಸರಿಗೆ ನೀಡಿರುವ ದೂರನ್ನು** ನಿ.ಪಿ.**2** ಎಂದು**, Discharge Summary** ಅನ್ನು ನಿ.ಪಿ.**3** ಎಂದು ಗುರುತಿಸಿದೆ**.**

2) ಈಗ ಸಾಕ್ಷಿದಾರರು ತಮ್ಮ ಮೂಲ ಆಧಾರ್ ಕಾರ್ಡ್ ದಾಖಲೆ ಮತ್ತು ಇದೇ ದಾಖಲೆಯ ಫೋಟೋ ಪ್ರತಿಯನ್ನು ಹಾಜರುಪಡಿಸಿದ್ದಾರೆ**.** ಸದರಿ ಮೂಲ ಪ್ರತಿಯನ್ನು ಮತ್ತು ಫೋಟೋ ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟು ಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಯನ್ನು ಸಿದ್ದಪಡಿಸಿದ್ದಾರೆ ಎಂದು ಕಂಡು ಬರುತ್ತದೆ**.** ಆದ ಕಾರಣದಿಂದ ಸದರಿ ಫೋಟೋ ಪ್ರತಿಯನ್ನು ನಿ.ಪಿ.**4** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ**.**

3) ಐಎಂವಿ ವರದಿಯನ್ನು ನಿ.ಪಿ.**5** ಎಂದು**,** ಕಚ್ಚಾ ನಕ್ಷೆಯನ್ನು ನಿ.ಪಿ.**6** ಎಂದು ಗುರುತಿಸಿದೆ**.**

4) ಸ್ಥಳ ಪಂಚನಾಮೆಯನ್ನು ನಿ.ಪಿ.**7** ಎಂದು ಗುರುತಿಸಿದೆ**.**

**ಸೂಚನೆಃ** ನಿ.ಪಿ.**1** ರಿಂದ ನಿ.ಪಿ.**7** ಎಂದು ಗುರುತು ಆಗಿರುವ ದಾಖಲೆಗಳು ಮತ್ತೊಂದು ಪ್ರಕರಣದಿಂದ ಪಡೆದುಕೊಂಡಿರುವ ಧೃಡೀಕೃತ ನಕಲುಗಳು ಆಗಿವೆ.

5) ವಿಜಯಶ್ರೀ ಆಸ್ಪತ್ರೆಯವರು ನೀಡಿರುವ ದಾಖಲೆಯನ್ನು ನಿ.ಪಿ.**8** ಎಂದು, ಹೊರರೋಗಿ ವಿಭಾಗದ ಚೀಟಿಯನ್ನು ನಿ.ಪಿ.**9** ಎಂದು, ಗಾಯದ ಪ್ರಮಾಣ ಪತ್ರಗಳನ್ನು ನಿ.ಪಿ.**10** ಮತ್ತು ನಿ.ಪಿ.**11** ಎಂದು ಗುರುತಿಸಿದೆ.

6) **2 X-ray** ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**12** ಎಂದು ಗುರುತಿಸಿದೆ.

7) ಮತ್ತೆ **8 X-ray** ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**13** ಎಂದು ಗುರುತಿಸಿದೆ.

8) ಒಟ್ಟು **15** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**14** ಎಂದು ಗುರುತಿಸಿದೆ.

9) ಶುಂಠಿ ಬೆಳೆ ಮಾರಾಟ ಮಾಡಿರುವ ಬಗ್ಗೆ ಇರುವ ರಶೀದಿಗಳನ್ನು ನಿ.ಪಿ.**15** ರಿಂದ ನಿ.ಪಿ.**18** ಎಂದು ಗುರುತಿಸಿದೆ.

10)ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.